# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1520(1802) |
| ಸದಸ್ಯರ ಹೆಸರು | : | ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಪ್ರಸ್ತುತ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td rowspan="2">ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ವಿವರ ಕೆಳಕಂಡಂತಿದೆ.<br><br>ಪ್ರಾಥಮಿಕ ಶಾಲೆಗಳು : 45572<br>ಪ್ರೌಢ ಶಾಲೆಗಳು : 12079<br><br>2022ನೇ ಸಾಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ರಾಜ್ಯದಲ್ಲಿ 15000 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿದ್ದು, ಅಂತಿಮ ಆಯ್ಕೆಪಟ್ಟಿಯಲ್ಲಿ 13352 ಹುದ್ದೆಗಳು ಆಯ್ಕೆಯಾಗಿರುತ್ತವೆ. ಸದರಿ 13352 ಹುದ್ದೆಗಳಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ನ್ಯಾಯಾಲಯದ ಪ್ರಕರಣಗಳನ್ನು ಹೊರತುಪಡಿಸಿ ನೇಮಕಾತಿ ಅಧಿಸೂಚನೆ/ನಿಯಮಗಳಂತೆ ಎಲ್ಲಾ ಷರತ್ತು ಮಾನದಂಡಗಳನ್ನು ಪೂರೈಸಿರುವ ಒಟ್ಟು 12,419 ಶಿಕ್ಷಕರಿಗೆ ನೇಮಕಾತಿ ಆದೇಶ ನೀಡಲಾಗಿದ್ದು, 12,419 ಶಾಲಾ ಶಿಕ್ಷಕರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲಾಗಿದೆ.<br><br>2026-27 ನೇ ಸಾಲಿನಲ್ಲಿ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತರ್ಕಬದ್ಧಗೊಳಿಸಿ 15000 ಹುದ್ದೆಗಳನ್ನು ಮಾಡಲು ಕ್ರಮವಹಿಸಲಾಗುವುದು ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಕಂಡಿಕೆ 115ರಲ್ಲಿ ಘೋಷಿಸಿರುತ್ತಾರೆ.<br><br>ಮುಂದುವರೆದು ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪ್ರಾಥಮಿಕ ಶಾಲೆಗಳಲ್ಲಿ 34027 ಹಾಗೂ ಪ್ರೌಢ ಶಾಲೆಗಳಲ್ಲಿ 9499 ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನಿವಾರಿಸಲು ಕ್ರಮವಹಿಸಿದೆ.</td></tr>
<tr><td>ಆ)</td><td>ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು;</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲೆ ಪ್ರಮಾಣ ಹೇಗೆ ಬದಲಾಗಿದೆ;</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲೆ ಪ್ರಮಾಣ ಈ ಕೆಳಕಂಡಂತಿದೆ.<table><tr><th>ಕ್ರ.ಸಂ</th><th>ವರ್ಷ</th><th>ವಿದ್ಯಾರ್ಥಿಗಳ ಸಂಖ್ಯೆ</th></tr><tr><td>1</td><td>2022-23</td><td>4294461</td></tr><tr><td>2</td><td>2024-25</td><td>4074525</td></tr><tr><td>3</td><td>2025-26</td><td>3845845</td></tr></table></td></tr>
<tr><td>ಈ)</td><td>ಶಾಲಾ ಬಿಡುವು ಪ್ರಮಾಣ(Dropout Rate)ಕಡಿಮೆ ಮಾಡಲು ಸರ್ಕಾರದಿಂದ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ;</td><td>ಶೈಕ್ಷಣಿಕ ಗುಣಮಟ್ಟದ ಪ್ರಗತಿಗಾಗಿ ಹಾಗೂ ಶಾಲಾ ಬಿಡುವು ಪ್ರಮಾಣ (Dropout Rate) ಕಡಿಮೆ ಮಾಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ:<br><br>ಸೇತುಬಂಧ ಕಾರ್ಯಕ್ರಮ (Bridge Course): ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ತಿಳಿದುಕೊಳ್ಳಲು ಹಾಗೂ ಅವರ ಕಲಿಕಾ ಅಂತರವನ್ನು ಕಡಿಮೆ ಮಾಡುವ</td></tr>
</table>

| | | |
|---|---|---|
| | | ಉದ್ದೇಶದಿಂದ ಸೇತುಬಂಧ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಮೂಲಕ ತರಗತಿ ಮಟ್ಟಕ್ಕೆ ತಕ್ಕಂತೆ ಕಲಿಕೆಯನ್ನು ಸುಗಮಗೊಳಿಸಲಾಗುತ್ತಿದೆ.<br><br>ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ(FLN): ವಿದ್ಯಾರ್ಥಿಗಳಲ್ಲಿ ಬುನಾದಿ ಓದು, ಬರವಣಿಗೆ ಮತ್ತು ಗಣಿತ ಸಾಮರ್ಥ್ಯವನ್ನು ಬೆಳೆಸಲು FLN ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಸಾಕ್ಷರತೆಗೆ 09 ಮತ್ತು ಸಂಖ್ಯಾಜ್ಞಾನಕ್ಕೆ 08 ಸೇರಿ ಒಟ್ಟು 17 ಕಲಿಕಾ ಫಲಗಳನ್ನು ಆಧಾರವಾಗಿಟ್ಟುಕೊಂಡು ಶಾಲಾ ಹಂತದಲ್ಲಿ ಕಾರ್ಯಗತಗೊಳಿಸಲಾಗುತ್ತಿದ್ದು, ಡಯಟ್‌ಗಳ ಮೂಲಕ ನಿರಂತರವಾಗಿ ಮೇಲ್ವಿಚಾರಣೆ ನಡೆಯುತ್ತಿದೆ.<br><br>ಪೂರ್ವ ಪ್ರಾಥಮಿಕ (Pre-Primary): ಸರ್ಕಾರಿ ಶಾಲೆಗಳ ದಾಖಲಾತಿಯನ್ನು ಹೆಚ್ಚಿಸುವುದು ಮತ್ತು ಮಕ್ಕಳನ್ನು ಔಪಚಾರಿಕ ಶಿಕ್ಷಣಕ್ಕೆ ಸಿದ್ಧಗೊಳಿಸುವ ಉದ್ದೇಶದಿಂದ 6675 ಸರ್ಕಾರಿ ಶಾಲೆಗಳಲ್ಲಿ LKG ಮತ್ತು UKG ತರಗತಿಗಳನ್ನು ಪ್ರಾರಂಭಿಸಲಾಗಿದೆ.<br><br>ದ್ವಿಭಾಷಾ ತರಗತಿಗಳು (Bilingual Classes): ಪ್ರಾಥಮಿಕ ಹಂತದಿಂದಲೇ ಮಕ್ಕಳಲ್ಲಿ ಆಂಗ್ಲ ಭಾಷಾ ಕೌಶಲ್ಯವನ್ನು ಅಭಿವೃದ್ಧಿಪಡಿಸಲು 2019-20 ರಿಂದ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಈ ತರಗತಿಗಳಲ್ಲಿ ಬೋಧಿಸುವ ಶಿಕ್ಷಕರಿಗೆ EMTIP ತರಬೇತಿಯನ್ನು ನೀಡಲಾಗುತ್ತಿದೆ.<br><br>English Language Enrichment Course (ELEC): ಶಿಕ್ಷಕರ ಆಂಗ್ಲ ಭಾಷಾ ಕೌಶಲ್ಯವನ್ನು ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸಲು 2025-26ರಲ್ಲಿ ರಾಜ್ಯದ 10,050 ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ELEC ತರಬೇತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪಾಠ ಆಧಾರಿತ ಮೌಲ್ಯಾಂಕನ (Lesson-Based Assessment): 2025-26 ಶೈಕ್ಷಣಿಕ ವರ್ಷದಿಂದ 1ರಿಂದ 10ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದಕ್ಕಾಗಿ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಲಾಗಿದೆ.<br><br>ಸಂಭ್ರಮ ಶನಿವಾರ (No Bag Day): ವಿದ್ಯಾರ್ಥಿಗಳ ಮೇಲೆ ಬ್ಯಾಗ್ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ಪ್ರತಿ ತಿಂಗಳ ಮೂರನೇ ಶನಿವಾರ ಮತ್ತು ಉರ್ದು ಶಾಲೆಗಳಿಗೆ ಮೂರನೇ ಶುಕ್ರವಾರವನ್ನು ಬ್ಯಾಗ್ ರಹಿತ ದಿನವನ್ನಾಗಿ ಆಚರಿಸಲಾಗುತ್ತಿದೆ.<br><br>ಮೌಲ್ಯ ಶಿಕ್ಷಣ(Value Education): ತಂತ್ರಜ್ಞಾನ ಮತ್ತು ಮಾಧ್ಯಮಗಳ ಪ್ರಭಾವದಲ್ಲಿರುವ ಇಂದಿನ ಸಮಾಜದಲ್ಲಿ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬೆಳೆಸಲು ವಿವಿಧ ಚಟುವಟಿಕೆಗಳನ್ನೊಳಗೊಂಡ ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳನ್ನು ಸಿದ್ಧಪಡಿಸಿ, ಶಿಕ್ಷಕರಿಗೆ ಪೈಲಟ್ ತರಬೇತಿ ನೀಡಲಾಗಿದೆ.<br><br>ಕಂಪ್ಯೂಟರ್ ಲ್ಯಾಬ್ (Computer Lab): ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡಲು ಆಯವ್ಯಯ ಕಂಡಿಕೆ ಸಂಖ್ಯೆ: 114ರಡಿ 218 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಮತ್ತು ಇಂಟರ್ನೆಟ್ ಸೌಲಭ್ಯ ಒದಗಿಸಲಾಗುತ್ತಿದೆ.<br><br>ವಿಜ್ಞಾನ ಪ್ರಯೋಗಾಲಯ (Science Lab): ವೈಜ್ಞಾನಿಕ ಮನೋಭಾವ ಮತ್ತು ಪ್ರಾಯೋಗಿಕ ಕಲಿಕೆಯನ್ನು ಉತ್ತೇಜಿಸಲು |

| | | |
|---|---|---|
| | | "ಪ್ರಯೋಗದರ್ಶಿ" ಕೈಪಿಡಿಯನ್ನು ಸಿದ್ಧಪಡಿಸಿ, ಆಯವ್ಯಯ ಕಂಡಿಕೆ 114ರಡಿ 250 ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ.<br><br>ಕಲಿಕಾದೀಪ(Kalikadeepa): AI ಆಧಾರಿತ 'ಕಲಿಕಾದೀಪ' ಕಾರ್ಯಕ್ರಮದ ಮೂಲಕ 4 ರಿಂದ 6ನೇ ತರಗತಿಯ ವಿದ್ಯಾರ್ಥಿಗಳು ಕನ್ನಡ, ಆಂಗ್ಲ ಓದು ಹಾಗೂ ಮೂಲ ಗಣಿತ ಕೌಶಲ್ಯಗಳನ್ನು ಆತ್ಮವಿಶ್ವಾಸದಿಂದ ಕಲಿಯಲು 1145 ಸರ್ಕಾರಿ ಶಾಲೆಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>Digital Nagarik: ಸುರಕ್ಷಿತ ಇಂಟರ್ನೆಟ್ ಬಳಕೆ, ಸೈಬರ್ ಸುರಕ್ಷತೆ ಮತ್ತು ಆನ್‌ಲೈನ್ ಶಿಷ್ಟಾಚಾರ ಕುರಿತು ಅರಿವು ಮೂಡಿಸಲು 2025-26ರಲ್ಲಿ 6ರಿಂದ 10ನೇ ತರಗತಿ ಹಾಗೂ ಪಿಯುಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ Diksha ವೇದಿಕೆಯಲ್ಲಿ MIP ಅನ್ನು ಅಳವಡಿಸಲಾಗಿದೆ.<br><br>ದೀಕ್ಷಾ (Diksha): ಇ-ಕಂಟೆಂಟ್ ಸೃಜನ ಮತ್ತು ಬಳಕೆಗೆ ರಾಜ್ಯ ಸಂಪನ್ಮೂಲ ತಂಡ (SRG) ಹಾಗೂ ಜಿಲ್ಲಾ ಸಂಪನ್ಮೂಲ ತಂಡ (DRG) ಗಳಿಗೆ ತರಬೇತಿಗಳನ್ನು ನಡೆಸಲಾಗಿದ್ದು, ಇ-ಕಂಟೆಂಟ್ ಅನ್ನು ಪಠ್ಯಪುಸ್ತಕದ QR ಕೋಡ್‌ಗಳಿಗೆ ಜೋಡಿಸಲಾಗಿದೆ.<br><br>TELEMANAS: ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡ ನಿರ್ವಹಣೆಗಾಗಿ, TELEMANAS Toll Free (14416) ಸಂಖ್ಯೆಯನ್ನು ಶಾಲೆಗಳಲ್ಲಿ ಪ್ರಚುರ ಪಡಿಸಲು Poster ಗಳನ್ನು ನೀಡಲಾಗಿದೆ.<br><br>NMMS: GMAT(General Mental Aptitude Test)& SAT (Scholastic Aptitude Test) ಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಲು ಪರೀಕ್ಷಾ ಕೈಪಿಡಿ ಸ್ಪರ್ಧಾ ಕಲಿ, ಸ್ಪರ್ಧಾ ಯಶಸ್ಸುಗಳನ್ನು ಒದಗಿಸಲಾಗಿದೆ. ಶಿಕ್ಷಕರ ಮೂಲಕ ತರಬೇತಿ ನೀಡಲು ಕ್ರಮವಹಿಸಲಾಗಿದೆ. ವಿಡಿಯೋ ಪಾಠಗಳನ್ನು ಸಿದ್ಧಪಡಿಸಿ DSERT jnanadeepa You tube channel ಮೂಲಕ ಪ್ರಸಾರ ಮಾಡಲಾಗಿದೆ. |
| **ಊ)** | ವಿದ್ಯಾರ್ಥಿಗಳ ಕಲಿಕೆ ಮಟ್ಟವನ್ನು ಅಳೆಯಲು ಯಾವ ರೀತಿಯ ಮೌಲ್ಯಮಾಪನ ಕ್ರಮಗಳನ್ನು ಅನುಸರಿಸಲಾಗುತ್ತಿದೆ? | 1.ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅಳೆಯಲು ತರಗತಿಯಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ(CCE) ಪ್ರಕ್ರಿಯೆಯನ್ನು ಅಳವಡಿಸಲಾಗಿದ್ದು, ಇದರ ಭಾಗವಾಗಿ ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಾಂಕನ ಕಾರ್ಯವನ್ನು ನಡೆಸಲಾಗುತ್ತಿದೆ.<br><br>2. ಪ್ರಸಕ್ತ ಸಾಲಿನಲ್ಲಿ ಇಲಾಖೆ ವತಿಯಿಂದ ಹೊಸ ಉಪಕ್ರಮವಾದ LBA (Lesson-Based Assessment)ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿ ಪ್ರತಿ ಪಾಠದ ನಂತರ ಮಕ್ಕಳ ಕಲಿಕೆಯನ್ನು ದೃಢೀಕರಿಸಿಕೊಳ್ಳಲಾಗುತ್ತಿದೆ. ಅಂಕಗಳನ್ನು ತಂತ್ರಾಂಶದಲ್ಲಿ ಅಳವಡಿಸಿ ಕಲಿಕಾ ಅಂತರವಿರುವ ಮಕ್ಕಳನ್ನು ಗುರುತಿಸಿ ಸೂಕ್ತ ಪರಿಹಾರ ಬೋಧನೆ ಮಾಡುವ ಮೂಲಕ ತರಗತಿ ನಿರ್ದಿಷ್ಟ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ ಹಾಗೂ ನಿರಂತರವಾಗಿ ಅನುಪಾಲನೆ ಮಾಡಲಾಗುತ್ತಿದೆ. |

ಸಂಖ್ಯೆ: ಇಪಿ 73 ಪಿಎಂಎ 2026

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು